JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ತ. ರಾ. ಸು ಅವರ ಮದಕರಿ ನಾಯಕ ಹಾಗೂ ಹೈದರಾಲಿಯ ಕಥನ : ದುರ್ಗಾಸ್ತಮಾನ

**ಡಾ. ಪಿ. ನಂಜುಂಡ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು
ಬೆಂಗಳೂರು – 560 001

ತ.ರಾ.ಸು ಅವರು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಐತಿಹಾಸಿಕವಾದ ವಿಷಯಗಳನ್ನು ತೆಗೆದುಕೊಂಡು ಇತಿಹಾಸಕ್ಕೆ ಅಪಪ್ರಚಾರವಾಗದಂತೆ ಸಾಕಷ್ಟು ಪೂರ್ವ ಅಧ್ಯಯನಗಳನ್ನು ನಡೆಸಿ ಸಂಬಂಧಿಸಿ ವ್ಯಕ್ತಿ ಸಮುದಾಯಗಳೊಂದಿಗೆ ಮುಕ್ತವಾದ ಚರ್ಚೆಯನ್ನು ನಡೆಸಿ ಬರೆಯುವವರು.

ತ.ರಾ.ಸು. ಅವರು ಚಿತ್ರದುರ್ಗದ ಬಗ್ಗೆ ವಿಶೇಷವಾದ ಮಮತೆಯನ್ನು ಹೊಂದಿರುವವರು. ಚಿತ್ರದುರ್ಗದ ಪಾಳೇಗಾರರ ಬಗ್ಗೆ ಬರೆಯುವುದಕ್ಕೆ ಹಿಂದೆ ಚಾರಿತ್ರಿಕವಾದ ಒತ್ತಡವಿತ್ತು.

ಚಿತ್ರದುರ್ಗದ ಪಾಳೇಗಾರರ ಬಗ್ಗೆ ಇಂದಿಗೂ ಚಿತ್ರದುರ್ಗದ ಜನರು ಅಭಿಮಾನಗಳನ್ನು ಹೊಂದಿದ್ದಾರೆ. ಚಿತ್ರದುರ್ಗದ ಮಣ್ಣು ಮೂಲತಃ ಹೋರಾಟದ ಯುದ್ಧಭೂಮಿಯನ್ನು ಕಂಡ ಧರೆ. ಈ ಧರೆಯನ್ನು ಅನೇಕ ಪಾಳೇಗಾರರು ಸುಮಾರು ವರ್ಷಗಳು ಆಳಿದ್ದಾರೆ. ಆದರೆ ಚಿತ್ರದುರ್ಗದ ಹಿಂದಿನ ಇಂದಿನ– ಮುಂದಿನ ಮನಸ್ಸುಗಳಲ್ಲಿ ಖಂಡಿತವಾಗಿ ಇರುವವನೇ ಜಾನಕಲ್ಲಿನ ಮದಕರಿನಾಯಕ.

ತ.ರಾ.ಸು ಅವರು ಈ ಕಾದಂಬರಿಯನ್ನು ರಚನೆಯನ್ನು ಮಾಡುವ ವೇಳೆಯಲ್ಲಿ ಅವರ ವಯಸ್ಸು 63 ಅವರೇ ಕಾದಂಬರಿಯಲ್ಲಿ ದಾಖಲಿಸಿರುವಂತೆ ಆರಂಭ. 10–08–1981 ಮುಕ್ತಾಯ 29–12–1981 ಸುಮಾರು ನಾಲ್ಕು ತಿಂಗಳುಗಳ ಕಾಲ ರಚನೆ ಮಾಡಿದ ಕಾದಂಬರಿ ಮೂಲದಲ್ಲಿ 1500 ಪುಟಗಳನ್ನು ಮೀರುತ್ತಿದ್ದರೂ, ಕಾದಂಬರಿಯ ಮೂಲ ಆಶಯಕ್ಕೆ ಭಂಗ ಬಾರದಂತೆ 698 ಪುಟಗಳಲ್ಲಿ ಚಿತ್ರದುರ್ಗದ ವಿವರಗಳನ್ನು ಕಲಾತ್ಮಕವಾಗಿ, ಕುಸೂರಿ ಕೆತ್ತಿದ ಹಾಗೇ ದಾಖಲಿಸುವ ಕೆಲಸವನ್ನು ಮಾಡಿದ್ದಾರೆ. 1982 ನವೆಂಬರ್ 16ರ ಹೊತ್ತಿಗೆ ಪ್ರಥಮ ಮುದ್ರಣ ಕಂಡು, ಇಲ್ಲಿಗೆ 40 ವರ್ಷಗಳನ್ನು ಯಶಸ್ವಿಯಾಗಿ ಪೂರೈಸುವ ದುರ್ಗದ ಕಾದಂಬರಿ, ಈಗಲೂ ಮೊದಲ ಬಾರಿಗೆ ಕಾದಂಬರಿ ಓದುವವರಿಗೆ ಮೈ ಜುಂಮ್ ಎನಿಸುವ ಅನುಭವವನ್ನು ಖಂಡಿತವಾಗಿಯೂ ನೀಡುತ್ತದೆ.

ತ.ರಾ.ಸು ಅವರು ದುರ್ಗಾಸ್ತಮಾನ ಕಾದಂಬರಿ ಬರುವುದಕ್ಕಿಂತ ಮುಂಚೆ ಚಿತ್ರದುರ್ಗದ ಪಾಳೆಯಗಾರರನ್ನು ಕುರಿತು ಕಸ್ತೂರಿ ಕಂಕಣ–ಭಾಗ –1,2, ವಿಜಯೋತ್ಸವ – ಭಾಗ 1, 2, ಹೊಸಹಗಲು, ತಿರುಗುಬಾಣ, ರಕ್ತರಾತ್ರಿ, ರಾಜ್ಯದಾಹ, ಕಂಬನಿಯ ಕುಯಿಲು ಬರೆದಿದ್ದರೂ, ಕನ್ನಡ ಸಾಹಿತ್ಯದಲ್ಲಿ ತ. ರಾ.ಸು ಅವರಿಗೆ ಭದ್ರವಾದ ಸ್ಥಾನವನ್ನು ನೀಡಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕಾದಂಬರಿಯಾಗಿ ಜನಮನ್ನಣೆ, ಚಿತ್ರದುರ್ಗದ ಜನರ ಅಭಿಮಾನವನ್ನು ಹೊಂದಿರುವುದು ಏಕಮಾತ್ರ ಕಲಾಕೃತಿ ಅದುವೇ ದುರ್ಗಾಸ್ತಮಾನ ಕಾದಂಬರಿ.

ತ.ರಾ.ಸು ಅವರ ಮಹತ್ವಾಕಾಂಕ್ಷೆ ಕೃತಿಯಾದ ದುರ್ಗಾಸ್ತಮಾನ ಕಾದಂಬರಿಯನ್ನು ತ.ರಾ.ಸು ಅವರು ಅರ್ಪಣೆ ಮಾಡಿರುವುದು ಇಬ್ಬರಿಗೆ, ಅವರೇ ಪುಸ್ತಕದ ಅರ್ಪಣೆಯಲ್ಲಿ ಹೇಳಿರುವಂತೆ ಈ ಕೃತಿ ರಚನೆಗೆ ತಮ್ಮ ಅಪಾರ ಅಭಿಮಾನದ ಶಕ್ತಿಯನ್ನು ನನ್ನಲ್ಲಿ ತುಂಬಿ ನನ್ನ ಕನಸು – ಕಾದಂಬರಿ ರೂಪವಾಗಿ ಮೈದಳೆಯಲು ಕಾರಣವಾದ ನನ್ನ ಒಲವಿನ 'ಚಿತ್ರದುರ್ಗದ ಮಹಾಜನತೆಗೆ' ಮತ್ತು 'ಕನ್ನಡದ ಪ್ರಾತಃ ಸ್ಮರಣೀಯ ವ್ಯಕ್ತಿ ಮಹಾನ್ ಸಾಹಿತ್ಯ ಶಕ್ತಿ ದಿವಂಗತ ಪ್ರೊ. ಟಿ. ಎಸ್.

ವೆಂಕಣ್ಣಯ್ಯನವರಿಗೆ' ಎಂದು ಹೇಳುವಲ್ಲಿ ತ. ರಾ. ಸು ಅವರಿಗೆ ಅರಿವಿತ್ತು ಎಂದೆನಿಸುತ್ತದೆ. ಐತಿಹಾಸಿಕ ಕಾದಂಬರಿಯಾದ ದುರ್ಗಾಸ್ತಮಾನ ಜನರ ಮನಸ್ಸಿನಲ್ಲಿ ಚಿತ್ರದುರ್ಗದ ಪಾಳೇಗಾರರ ಬದುಕನ್ನು ಪುನರ್ ಸೃಷ್ಟಿಸಿ, ಇತಿಹಾಸವನ್ನು ನಿರ್ಮಿಸುತ್ತದೆಂದು.

ನಿಜಕ್ಕೂ ದುರ್ಗಾಸ್ತಮಾನ ಕಾದಂಬರಿಯನ್ನು ಅಧ್ಯಯನ ಮಾಡಲು ಹೊರಟರೆ ನಿಜಕ್ಕೂ ಮೈ ರೋಮಾಂಚನವಾಗುತ್ತದೆ. ನಮ್ಮ ಕಣ್ಣ ಮುಂದೆಯೇ ಯುದ್ಧದ ಸನ್ನಿವೇಶಗಳು ನಡೆಯುತ್ತಿದೆಯೆಂದು ಭಾಸವಾಗುವಂತೆ ಚಿತ್ರಕತನ್ಮಯತೆಯಿಂದ ಓದಿಸಿಕೊಂಡು ಹೋಗುವ ಶಕ್ತಿ ಈ ಬೃಹತ್ ಹಾಗೆಯೇ ಮಹತ್ತ್ ಕಾದಂಬರಿಗಿದೆ.

ಕುವೆಂಪು ಅವರು ಹೇಳುವ ಕಾದಂಬರಿ 'ಕರತಲರಂಗಭೂಮಿ' ಮಾತುಗಳು ಅಕ್ಷರಶಃ ನಿಜವಾಗುವಂತೆ ದುರ್ಗಾಸ್ತಮಾನ ಕಾದಂಬರಿಯಿದೆ. ತ. ರಾ. ಸು. ಅವರು ಅನೇಕ ಐತಿಹಾಸಿಕ ಕಾದಂಬರಿ ಬರೆದು ತಮ್ಮ ಶೈಲಿಯಲ್ಲಿ ಐತಿಹಾಸಿಕ ವಿವರಗಳ ಮೊನಚನ್ನು ಉಳಿಸಿಕೊಂಡಿದ್ದವರು. ಆದರೆ ದುರ್ಗಾಸ್ತಮಾನ ಕಾದಂಬರಿ ಅವರಿಗೆ ಐತಿಹಾಸಿಕ ಕಾದಂಬರಿ ಸಾರ್ವಭೌಮ ಎನ್ನುವ ಪಟ್ಟವನ್ನು ದುರ್ಗಾಸ್ತಮಾನ ಕಾದಂಬರಿ ಅವರಿಗೆ ನೀಡಿದೆ.

ತ.ರಾ.ಸು ದುರ್ಗಾಸ್ತಮಾನ ಕೃತಿಯಿಂದ ಅವರು ಅಮರರಾಗಿದ್ದಾರೆ ಹಾಗೆಯೇ ಈ ಕಾದಂಬರಿಯು ಸಹ.

ತ.ರಾ.ಸು ಅವರ ಈ ಕಾದಂಬರಿ ಸಾಹಿತ್ಯದ ವಿದ್ಯಾರ್ಥಿಗಳಿಗೆ ಮಾತ್ರ ಪ್ರಿಯವಾಗುವುದಿಲ್ಲ. ಅನೇಕ ಅನ್ಯಜ್ಞಾನಶಿಸ್ತಿನ ವಿದ್ಯಾರ್ಥಿಗಳಿಗೂ ಈ ಕೃತಿ ಅಪ್ಯಾಯಮಾನವಾಗುತ್ತದೆ.

ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಮನಃಶಾಸ್ತ್ರ, ಮಹಿಳಾ ಅಧ್ಯಯನ, ಭೂಗೋಳಶಾಸ್ತ್ರ, ಹಾಗೂ ರಂಗಭೂಮಿ ವಿದ್ಯಾರ್ಥಿಗಳಿಗೂ ಒಂದು ಮುಖ್ಯ ಆಕರ ಪಠ್ಯವಾಗಿದೆ. ಕಾರಣ ಈ ಕಾದಂಬರಿ ಚಿತ್ರದುರ್ಗದ ಪಾಳೇಗಾರರ ಕಥನವನ್ನು ಮಾತ್ರ ಹೇಳದೇ ಆ ಕಾಲವನ್ನು ಮರು ಸೃಷ್ಟಿಸುವ ಪ್ರಯತ್ನವನ್ನು ನಿಸ್ ಸಂದೇಹವಾಗಿ ಮಾಡಿದೆ. ಸಮರ ಕಲೆಯನ್ನು ತಿಳಿದುಕೊಳ್ಳುವವರಿಗೂ ಇದೊಂದು ಆಸಕ್ತಿದಾಯಕವಾದ ತೆರೆದ ಪಠ್ಯವಾಗಿದೆ.

ದುರ್ಗಾಸ್ತಮಾನ ಅಧ್ಯಯನ ನಡೆಸುವವರಿಗೆ ತಮ್ಮ ಬದುಕಿನಲ್ಲಿ ಒಮ್ಮೆಯಾದರೂ ಚಿತ್ರದುರ್ಗದ ಕೋಟೆ-ಕೊತ್ತಳೆ-ಬತ್ತೇರಿಗಳನ್ನು ನೋಡಬೇಕು, ಕಾದಂಬರಿಯಲ್ಲಿರುವ ಪ್ರಮುಖ ಸ್ಥಳಗಳನ್ನು ವೀಕ್ಷಣೆ ಮಾಡಿ ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂಬ ಭಾವನೆ ಖಂಡಿತವಾಗಿಯೂ ಬರುತ್ತದೆ. ಹಿಂದೂ, ಮುಸ್ಲಿಂ, ಕ್ರೈಸ್ತರಿಗೆ ತಮ್ಮ ಬದುಕಿನಲ್ಲಿ ಒಮ್ಮೆಯಾದರೂ ನೋಡಲೇಬೇಕು ಎನ್ನುವ ಪುಣ್ಯ ಕ್ಷೇತ್ರಗಳಿದ್ದಂತೆ, ದುರ್ಗಾಸ್ತಮಾನ ಕಾದಂಬರಿಯನ್ನು ಓದಿ ಚಿತ್ರದುರ್ಗವನ್ನು ಕಣ್ಣುತುಂಬಿಕೊಳ್ಳಬೇಕು ಎನ್ನುವ ಆಸೆಯನ್ನು ಬಿತ್ತುವುದು ಖಂಡಿತ ಕಾದಂಬರಿಯನ್ನು ಅಧ್ಯಯನ ಮಾಡುವವರಿಗೆ.

ತ.ರಾ.ಸು ಅವರು ಈ ವಿಶಾಲವಾದ ಕಾದಂಬರಿಯನ್ನು ಮುಖ್ಯವಾಗಿ ಏಳು ಶೀರ್ಷಿಕೆ-ಉಪಶೀರ್ಷಿಕೆ - ಚಿತ್ರಗಳನ್ನು ನೀಡಿ ವಿಂಗಡಿಸುತ್ತಾರೆ.

1. ಪಟ್ಟಾಭಿಷೇಕದ ಪಂಜರ- ರಂಗಯ್ಯನಬಾಗಿಲು-ನಿರ್ಥಡಿ ಶ್ರೀ ರಂಗನಾಥಸ್ವಾಮಿ ಮಹಾದ್ವಾರ
2. ಗರಿಬಿಚ್ಚಿದ ಗರುಡ- ಕಾಮಗೇತಿ ಬಾಗಿಲು
3. ಸಿಡಿಲು ಮಿಂಚುಗಳೊಡನೆ ಸರಸ - ಟೀಕಿನ ಬಾಗಿಲು- ಕಸ್ತೂರಿ ರಂಗಪ್ಪನಾಯಕರ ಬಾಗಿಲು
4. ಸಂಚುಗಳ ಸುಳಿಯಲ್ಲಿ - ಶ್ರೋ ಅಹೋಬಲ ನರಸಿಂಹನದ್ವಾರ- ಕತ್ತರಿಬಾಗಿಲು
5. ಸಮರಾಗಮನ - ಶ್ರೀ ಉತ್ಸವಾಂಬಾಮಹಾದ್ವಾರ-ಸಿಹಿನೀರು ಹೊಂಡದ ಬಾಗಿಲು
6. ರಕ್ತ ರಂಜಿತ ರವಿ- ಸಿದ್ಧಯ್ಯನ ಬಾಗಿಲು - ಶ್ರೀ ಸಂಪಿಗೆ ಸಿದ್ದೇಶ್ವರ ಸ್ವಾಮಿ
7. ಮದಕರಿನಾಯಕನ ನನಸಾಗದ ಕನಸು- 'ಹೈದರಾಲಿಯ ಪಂಜರ'(?) ಎನ್ನುವ ಅಧ್ಯಾಯಗಳಲ್ಲಿ ಚಿತ್ರದುರ್ಗದ ಪಾಳೇಗಾರರ ಇತಿಹಾಸವನ್ನು ಅದರಲ್ಲೂ ಮುಖ್ಯವಾಗಿ ಚಿತ್ರದುರ್ಗ ಮತ್ತು ಮದಕರಿನಾಯಕನ ಅವಿನಾಭಾವ ಸಂಬಂಧಗಳನ್ನು ಹೇಳುತ್ತಲೇ, ಗುರುಮನೆ- ಅರಮನೆಗಳ ಕಥನವನ್ನು ಮಂಥಿಸುತ್ತಾ, ಹಿಂದೂ ಮುಸಲ್ಮಾನರ ರಾಜರುಗಳ ಸೈನಿಕರುಗಳ ಒಳ ಹೊರಗನ್ನು ದಾಖಲಿಸುವ ಕೆಲಸವನ್ನು ಮಾಡುತ್ತಲೇ ಇಲ್ಲಿ ಬರುವ ಮಹಿಳಾ ಪಾತ್ರಗಳು ಗಾಣದೆತ್ತಿನಂತೆ ದುಡಿಯುವ, ರಾಜರ- ಸೈನಿಕರ ಅಣತಿಯಂತೆ ನಡೆಯುವ ಶೋಷಿತವಾದ ಪಾತ್ರಗಳು ಕಾಣಸಿಗುತ್ತದೆ.

"ರಾಜ ಬಹುವಲ್ಲಬಾ" ಎನ್ನುವ ನಿದರ್ಶನಗಳು, ವಿವರಗಳು ದಟ್ಟವಾಗಿ ಕಾಣಸಿಗುತ್ತದೆ. ಈ ಕಾದಂಬರಿಯ ವಿಶೇಷತೆ ಜನಸಾಮಾನ್ಯರ ಬದುಕನ್ನು ವಾಸ್ತವತೆಯಿಂದ ಕಂಡಿದೆ ಎನ್ನುವುದು. ಮದಕರಿನಾಯಕ ಹಾಗೂ ಹೈದರಾಲಿಯ ಮುಖಾಮುಖಿಯಂತೆ ಮೇಲ್ನೋಟಕ್ಕೆ ಕಾಣುವ ದುರ್ಗಾಸ್ತಮಾನ ಕಾದಂಬರಿ, ಕಾದಂಬರಿಯ ಒಡಲಲ್ಲಿ ರಾಜ್ಯಕ್ಕಾಗಿ ಹಂಬಲಿಸುವ, ತಮ್ಮ ಪ್ರದೇಶ ಹಾಗೂ ಗಡಿಗಳನ್ನು ವಿಸ್ತಾರ ಮಾಡಿಕೊಳ್ಳಬೇಕೆನ್ನುವ ಆ ಕಾಲದ ಮನೋಧರ್ಮವು

ಕಾಣಸಿಗುತ್ತದೆ. ಯುದ್ಧದಲ್ಲಿ ಯಾರು ಶಾಶ್ವತ ಶತ್ರು– ಮಿತ್ರರಿರುವುದಿಲ್ಲ. ಸಮಯ, ಸಂದರ್ಭ ಹಾಗೂ ಸನ್ನಿವೇಶಗಳು ಮಿತ್ರತ್ವ ಮತ್ತು ಶತ್ರುತ್ವವನ್ನು ನಿರ್ಧರಿಸುತ್ತದೆ ಎನ್ನುವ ಕಾಲಜ್ಞಾನವು ಈ ಕಾದಂಬರಿಯಲ್ಲಿ ಅಡಕವಾಗಿದೆ.

ದುರ್ಗಾಸ್ತಮಾನ ಕಾದಂಬರಿ ಸೈನ್ಯದ ಬಗ್ಗೆ ಮಾರ್ಮಿಕವಾದ ಚಿತ್ರಗಳನ್ನು ಕಟ್ಟಿಕೊಡುತ್ತದೆ. ಜನಸಾಮಾನ್ಯರು ಯುದ್ಧದ ಬಗ್ಗೆ ಹೊಂದಿರುವ ವಾಸ್ತವಿಕತೆಯನ್ನು ಎಳೆ ಎಳೆಯಾಗಿ ಬಿಚ್ಚಿಡುವ ಪ್ರಯತ್ನ ಮಾಡುತ್ತದೆ. 'ರಾಮನ ಕಾಲ ಬಂದರು ರಾಗಿ ಬೀಸುವುದು ತಪ್ಪುವುದಿಲ್ಲ' ಎನ್ನುವ ಜನಪದರ ಆಶಯಗಳು ಈ ಕಾದಂಬರಿಯಲ್ಲಿ ಮತ್ತೆ ಮತ್ತೆ ಪುನರಾರ್ವತನೆಯಾಗುತ್ತದೆ. ಯುದ್ಧದ ಕೆಡುಕುಗಳನ್ನು ಈ ಕಾದಂಬರಿ ಓದುಗನಿಗೆ ಸೂಚ್ಯವಾಗಿ ತಿಳಿಸುವ ಪ್ರಯತ್ನವನ್ನು ಮಾಡುತ್ತದೆ.

ಕುವೆಂಪು ಅವರ ಸಶ್ಮಾನ ಕುರುಕ್ಷೇತ್ರ ನಾಟಕದಲ್ಲಿ ಪಾಂಡವರು– ಕೌರವರು ರಾಜ್ಯ ಕೇಂದ್ರಿತಕಾಳಗಗಳು, ಬಡಪಾಯಿ ಸೈನಿಕರನ್ನು ಹೇಗೆ ಬಲಿ ತೆಗೆದುಕೊಳ್ಳುತ್ತದೆ ಎನ್ನುವ ಮೃತನ ಸೈನಿಕನ ತಾಯಿ ಹಾಗೂ ಹೆಂಡತಿಯ ಸಂಭಾಷಣೆಯನ್ನು, ಪರೋಕ್ಷವಾಗಿ ದುರ್ಗಾಸ್ತಮಾನ ಕಾದಂಬರಿಯಲ್ಲಿ ನಾವು ಗಮನಿಸಬಹುದಾಗಿದೆ. ಯುದ್ಧಗಳ ಭೀಕರತೆಯಿಂದ ನಿಜಕ್ಕೂ ಆತಂಕಕ್ಕೆ ಒಳಗಾಗುವುದು ಜನಸಾಮಾನ್ಯರಾದ ಪ್ರಜೆಗಳು. ತಮ್ಮ ತಾಯ್ನಾಡಿನ ರಕ್ಷಣೆಗೆ ಚಿತ್ರದುರ್ಗಕ್ಕೆ ಅಪಾಯವಾದಾಗ ಜನಸಾಮಾನ್ಯರು ಹೇಗೆ ಒಂದಾಗುತ್ತಾರೆ ಎನ್ನುವ ದಟ್ಟವಾದ ವಿವರಗಳು ಕಾದಂಬರಿಯ ಕಡೆಯಲ್ಲಿ ಕಾಣಸಿಗುತ್ತದೆ.

ದುರ್ಗಾಸ್ತಮಾನ ಕಾದಂಬರಿಯಲ್ಲಿ ರಾಜನ ಪರಿವಾರಗಳು, ಪ್ರಧಾನಮಂತ್ರಿ ಹಾಗೂ ದಳವಾಯಿಗಳ ಚಿತ್ರಣಗಳು ಮೂಡುವಂತೆ, ಅವರಲ್ಲಿರುವ ಅಧಿಕಾರ ಕೇಂದ್ರಿತವಾದ ದಾಹಗಳನ್ನು ಗಮನಿಸಬಹುದಾಗಿದೆ.

ಚಿತ್ರದುರ್ಗದ ಹಿಂದಿನ ಅನೇಕ ಪಾಳೇಗಾರರು, ರಾಜರುಗಳ ವ್ಯಕ್ತಿ ಚಿತ್ರಗಳನ್ನು ದುರ್ಗಾಸ್ತಮಾನ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಆದರೆ ಈ ಕಾದಂಬರಿಯ ಕೇಂದ್ರ ಬಿಂದು ಚಿತ್ರದುರ್ಗ ಮದಕರಿನಾಯಕ. ಜಾನಕಲ್ಲು ಚಿತ್ರದುರ್ಗ ಸೀಮೆಯ ಆಯ ಕಟ್ಟಿನ ಗಡಿ ಕೋಟೆಯಿಂದ ಬಂದವನೇ ಗಂಡುಗಲಿ ಮದಕರಿನಾಯಕ, ಅವನ ತಮ್ಮ ಪರಶುರಾಮನಾಯಕ. ಇವರ ಪರಾಕ್ರಮದ ಸುತ್ತಲೇ ಮುಖ್ಯವಾಗಿ ಈ ಕಾದಂಬರಿ ಸಾಗುತ್ತದೆ. ಆದರೆ ಈ ಪಾತ್ರಗಳ ಚಾಲಕ ಶಕ್ತಿಗಳಾಗಿರುವುದು. ಓಬವ್ವನಾಗತಿ ಮತ್ತು ಪ್ರಧಾನಮಂತ್ರಿ ಕಳ್ಳಿನರಸಪ್ಪಯ್ಯ.

ಈ ಕಾದಂಬರಿಯಲ್ಲಿ ಕೆಲವು ಮುಖ್ಯವಾದ ಮಹಿಳಾ ಪಾತ್ರಗಳಿವೆ. ನಿಂಗವ್ವ ಓಬ್ಬವ್ವನಾಗತಿ,  ಛಲವಾದಿ ಓಬವ್ವ, ಲಕ್ಕಾಂಬೆ, ಪದ್ಮವ್ವನಾಗತಿ ಮತ್ತು ಬಂಗಾರವ್ವನಾಗತಿ ಮದಕರಿನಾಯಕನನ್ನು ಹಡೆದವಳು ನಿಂಗವ್ವ, ಪೊರೆದವಳು ಓಬವ್ವನಾಗತಿ. ಚಲವಾದಿ ಓಬವ್ವ, ಚಿತ್ರದುರ್ಗದ ಕೋಟೆಯನ್ನು ಕಳ್ಳಕಿಂಡಿಯಿಂದ ಹೈದರಾಲಿ ಸೈನಿಕರು ಬರಲು ಅವರನ್ನು ಸದೆಬಡಿದವಳು, ಚಿತ್ರದುರ್ಗದ ಕೋಟೆಯನ್ನು ರಕ್ಷಿಸಿದವಳು, ಮದಕರಿನಾಯಕನ ಪಾಲಿಗೆ ಚಲವಾದಿ ಓಬವ್ವ ಜಾತಿ ಸೂಚಕ ಹೆಣ್ಣಾಗದೇ, ಛಲವಾದಿ ಓಬವ್ವನಾಗಿ ಕೋಟೆ ರಕ್ಷಿಸಿದ ತಾಯಿಯಾದಳು. ಹಾಗೆಯೇ ಮದಕರಿನಾಯಕ ಯುದ್ಧದ ಭೀಕರತೆಯಿಂದ ಬಸವಳಿದಾಗ, ಛಲವಾದಿ ಓಬವ್ವ ತನ್ನ ಗಂಡನೊಂದಿಗೆ ಆಡುವ ಮಾತಿನಿಂದ ಸ್ಪೂರ್ತಿಗೊಂಡು, ಕಾಳಾಗಕ್ಕೆ ಸನ್ನದ್ಧನಾದನು.

ಉಳಿದ ಮೂರು ಪಾತ್ರಗಳಾದ ಲಕ್ಕಾಂಬೆ, ಪದ್ಮವ್ವನಾಗತಿ ಹಾಗೂ ಬಂಗಾವ್ವನಾಗತಿ ಮದಕರಿನಾಯಕನ ಮಡದಿಯರು. ಆದರೆ ಲಕ್ಕಾಂಬೆ ಮದಕರಿನಾಯಕನ ಜೀವನಕ್ಕೆ ಬಂದಷ್ಟೇ ವೇಗವಾಗಿ ಕಣ್ಮರೆಯಾದರೆ, ಕಡೆಯವರೆಗೂ ಪದ್ಮವ್ವನಾಗತಿ ಹಾಗೂ ಬಂಗಾರವ್ವನಾಗತಿ ಮದಕರಿಯ ಮೈ–ಮನಸ್ಸುಗಳಿಗೆ ಕಣ್ಣಾಗುತ್ತಾರೆ.

ಈ ಕಾದಂಬರಿಯ ಅತ್ಯಂತ ಶಕ್ತ, ಪ್ರಮುಖವಾದ ಮಹಿಳಾ ಪಾತ್ರ ಅದು ನಿಂಗವ್ವ ಮದಕರಿನಾಯಕನ ಬಾಲಲೀಲೆಯಿಂದ ಅಂತ್ಯಲೀಲೆಯವರೆಗೂ ಜೊತೆಯಲ್ಲಿದ್ದವಳು. ಮಗನ ಸಿಟ್ಟು, ಸೆಡವು, ನಗು, ಸುಖ, ದುಃಖ, ದುಮ್ಮಾನಗಳಿಗೆ ಸಾಕ್ಷಿಯಾದವಳು.

ಮದಕರಿನಾಯಕ ಬಹಳಷ್ಟು ಕಾಲ ಚಿತ್ರದುರ್ಗದ ಪಾಳೇಯಗಾರನಾಗಿ, ಯಶಸ್ವಿಯಾಗಿ ಕಾರ್ಯ ನಿರ್ವಹಿಸುವಲ್ಲಿ ನಿಂಗವ್ವ ಪಾತ್ರ ಹಿರಿದಾಗಿದೆ. ಹೇಗೆ ಛತ್ರಪತಿ ಶಿವಾಜಿ ಮಹಾರಾಜರಿಗೆ ಜೀಜಾಬಾಯಿ ತಾಯಿಯ ಮಾರ್ಗದರ್ಶನ, ಮಮತೆಯಿತ್ತೋ, ಹಾಗೆಯೇ ಮದಕರಿನಾಯಕನ ಬದುಕಿನ ಚದುರಂಗದಾಟದಲ್ಲಿ ಮುಖ್ಯವಾದ ಕಾಯಾಗಿದ್ದವಳು ಮದಕರಿನಾಯಕನ ಹೆತ್ತ ತಾಯಿ ನಿಂಗವ್ವ.

ದುರ್ಗಾಸ್ತಮಾನ ಕಾದಂಬರಿಯಲ್ಲಿ ಗುರುಮನೆ, ಅರಮನೆಗಳ ಸಾಮರಸ್ಯ, ಸಂಘರ್ಷ, ಮುಖಾಮುಖಿಗಳನ್ನು ಗಮನಿಸಬಹುದಾಗಿದೆ. ಚಿತ್ರದುರ್ಗ ಶ್ರೀಮುರುಘರಾಜೇಂದ್ರ ಮಠದ ಸ್ವಾಮಿಗಳ ಪ್ರಭಾವವು ಈ ಕಾದಂಬರಿಯಲ್ಲಿ ಗಮನಿಸಬಹುದು. ರಾಜರು– ಪ್ರಜೆಗಳು ಈ ಮಠದ ಭಕ್ತರಾಗಿರುವುದನ್ನು ಗಮನಿಸಬಹುದಾಗಿದೆ.

ಮದಕರಿನಾಯಕನಿಗೂ, ಗುರುಮನೆಗೂ ಒಮ್ಮೆ ಸೈನಿಕರ ವಿಚಾರಕ್ಕೆ ಬಿಗುವಿನ ವಾತಾವಾರಣ, ನಿರ್ಮಾಣವಾದಾಗ, ಗುರುಮನೆ ಧರ್ಮಕ್ಕೆ ಪ್ರಾಮುಖ್ಯತೆ ನೀಡಿದರೆ, ಅರಮನೆ ತನ್ನನ್ನು ನಂಬಿದ ಪ್ರಜೆಗೆ ಪ್ರಾಮುಖ್ಯತೆ ನೀಡಿತ್ತು. ಅಂತಿಮವಾಗಿ ಗುರುಮನೆಗೂ– ಅರಮನೆಗೂ ಕಡೆಯವರೆಗೂ ಕಂದಕ ಏರ್ಪಟ್ಟಿತ್ತು. ಅದು ಕಾದಂಬರಿಯ ಕಡೆಯಲ್ಲಿಯೂ ಮುಸ್ಲಿಂ ಸೈನಿಕರು ಧರ್ಮದ ಬಗ್ಗೆ ವಾಲುವುದನ್ನು ಗಮನಿಸಬಹುದು. ಕಾರ್ಲ್ ಮಾರ್ಕ್ಸ್ ಹಲವು ಶತಮಾನಗಳ ಹಿಂದೆಯೇ

ಹೇಳಿದಂತೆ 'ಧರ್ಮ ಒಂದು ಅಫೀಮು' ಎನ್ನುವ ಮಾತಿನಂತೆ, ಕಾದಂಬರಿಯ ಅಂತ್ಯದಲ್ಲಿ ಚಿತ್ರದುರ್ಗ ಪತನವಾಗುವುದು ಧರ್ಮ ಸಂಘರ್ಷದಿಂದಲೇ.

ಮದಕರಿನಾಯಕ– ಹೈದರಾಲಿಯ ನಡುವಿನ ದುರ್ಗದ ಕೋಟೆಯ ಸಮರದಲ್ಲಿ ಹಲವು ಬಾರಿ ಮದಕರಿನಾಯಕ ಜಯವನ್ನು ಪಡೆದರೂ, ಕಡೆಯದಾಗಿ ವಿಜಯಲಕ್ಷ್ಮಿ ಅಂತಿಮವಾಗಿ ಒಲಿಯುವುದು ಹೈದರಾಲಿಗೆ . ಇಬ್ಬರು ನೆಲಮೂಲ ಹೋರಾಟಗಾರರ ಚಿತ್ರಣವನ್ನು ದುರ್ಗಾಸ್ತಮಾನ ಕಾದಂಬರಿಯಲ್ಲಿ ಸೂಕ್ಷ್ಮವಾಗಿ ಗಮನಿಸಬಹುದಾಗಿದೆ.

ಹೈದರಾಲಿ ಬಡತನದಿಂದ ಬಂದು, ಸಾಮಾನ್ಯ ಸೈನಿಕನಾಗಿ ವಿಶಾಲವಾದ ರಾಜ್ಯಗಳನ್ನು ಗೆದ್ದು ರಾಜನಾದವನು. ಕುಟಿಲನೀತಿಗಳು, ಸಂಧಾನ, ಯುದ್ಧ, ರಕ್ತಗತವಾಗಿತ್ತು, ಹೈದರಾಲಿಗೆ ಆದರೆ ಮದಕರಿನಾಯಕ ಮಹಾಸ್ವಾಭಿಮಾನಿ ಮಾತಿಗೆ ತಪ್ಪದವನು, ರಾಜಕಾರಣದ ಒಳಸುಳಿವುಗಳನ್ನು ಅರಿಯದವನು. ಕೂದಲು ಸೀಳುವ ನ್ಯಾಯವನ್ನು ಮಾಡದವನು. ನೇರ–ನೇರವಾಗಿ ಶತ್ರುಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದಿದವನು. ಪ್ರಧಾನಮಂತ್ರಿ ಕಳ್ಳಿ ನರಸಪ್ಪನ ಸಾಮ–ದಾನ–ಭೇದ–ದಂಡವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಮನಸೊಪ್ಪದವನು ಮದಕರಿನಾಯಕ. ಅದರಿಂದಲೇ ಮದಕರಿನಾಯಕ ಚಿತ್ರದುರ್ಗವನ್ನು ಕಳೆದುಕೊಳ್ಳಬೇಕಾಯಿತು ಎನ್ನುವ ಮಾತುಗಳಲ್ಲಿ ಉತ್ಪ್ರೇಕ್ಷೆಯಿರಲಿಲ್ಲ. ವಾಸ್ತವತೆಯಿತ್ತು. ರಾಜನಾದವನಿಗೆ ಉಕ್ಕಿನ ಮನಸ್ಸು ಇರಬೇಕು ನಿಜವಾದರೂ ಕಾದಂಬರಿಯ ಉದ್ದಕ್ಕೂ ಮದಕರಿನಾಯಕನಿಗೆ ಇರುವುದು ಜನಸಾಮಾನ್ಯರ ಕಷ್ಟ ನಷ್ಟಗಳಿಗೆ ಮಿಡಿಯುವ ಮಾನವೀಯತೆಯ ಮನಸ್ಸು. ಹಲವು ಬಾರಿ ಶತ್ರುಗಳಿಗೆ ಶಿಕ್ಷೆಯಾಗುವಾಗ ಅದನ್ನು ನೋಡುವ ಮನಸ್ಸನ್ನು ಮದಕರಿನಾಯಕ ಮಾಡಿದವನಲ್ಲ.

ಮದಕರಿನಾಯಕನ ದೇಹ ವಜ್ರದಂತೆ ಕಠಿಣವಾಗಿತ್ತು. ಆದರೆ ಮನಸ್ಸು ಮೃದುವಾಗಿತ್ತು. ತನ್ನ ರಾಜ್ಯದಲ್ಲಿದ್ದ ಸೈನಿಕರನ್ನು ಜಾತ್ಯತೀತವಾಗಿ, ಧರ್ಮಾತೀತವಾಗಿ, ಲಿಂಗಾತೀತವಾಗಿ ನೋಡುವ ವಿಶಾಲವಾದ ಮುಕ್ತ ದೃಷ್ಟಿಕೋನ ಮದಕರಿಗಿತ್ತು. ಪ್ರದೇಶ ಕೇಂದ್ರಿತವಾಗಿ ಮದಕರಿ ಚಿತ್ರದುರ್ಗವನ್ನು ಕಾಣುತ್ತಾನೆ. ಆದ್ದರಿಂದಲೇ ಇಂದಿಗೂ ಸಹ ಚಿತ್ರದುರ್ಗದ ಜನತೆ, ಮದಕರಿನಾಯಕನ ಕತೆಯನ್ನು ತಿಳಿದ ಜನರು ಮುಕ್ತಕಂಠದಿಂದ ಹಾಡಿ ಹೊಗಳುವುದು. ಪೂಜ್ಯನೀಯ ಭಾವನೆಯಿಂದ ನೋಡುವುದು.

ಇಂದಿಗೂ ಚಿತ್ರದುರ್ಗದ ಮದಕರಿನಾಯಕ ಜನಪದರ ಹಾಸು–ಭಾವದಲ್ಲಿ ಒಂದಾಗಿದ್ದಾನೆ. ಮದಕರಿನಾಯಕನ ಬಗ್ಗೆ ಇರುವ ಅನೇಕ ಜನಪದರ ಮನದಾಳದ ಮಾತುಗಳ ಹಾಡುಗಳು ದುರ್ಗಾಸ್ತಮಾನ ಕಾದಂಬರಿಯಲ್ಲಿ ನಾವು ಗುರುತಿಸಬಹುದಾಗಿದೆ. ಈ ಕಾದಂಬರಿಯ ಮತ್ತೊಂದು ವಿಶೇಷತೆ ಪತ್ರ ಸಾಹಿತ್ಯವನ್ನು ಕಾಣಬಹುದಾಗಿದೆ.

ತ.ರಾ.ಸು ಅವರ ದುರ್ಗಾಸ್ತಮಾನ ಕಾದಂಬರಿ, ಕನ್ನಡ ಸಾಹಿತ್ಯದ ಅಪರೂಪದಲ್ಲಿ ಅಪರೂಪವಾದ ಒಂದೊಳ್ಳೆ ಐತಿಹಾಸಿಕ ಕಾದಂಬರಿ. ಇಂದಿನ ವೇಗದ ಬದುಕಿನ ಧಾವಂತದಲ್ಲಿ ಇಷ್ಟು ಬೃಹತ್ ಪ್ರಮಾಣದ ಕಾದಂಬರಿ ಓದಲು ಆಗುವುದಿಲ್ಲ ಎನ್ನುವ ಅಡ್ಡ ಮಾತನ್ನು, ಸಾಮಾನ್ಯವಾಗಿ ಇಂದು ಎಲ್ಲೆಡೆ ಕೇಳಿಸಿಕೊಳ್ಳಬಹುದು. ಆದರೆ ನಿಜಕ್ಕೂ ವಿಶೇಷವಾಗಿ ಸಾಹಿತ್ಯ ವಿದ್ಯಾರ್ಥಿಗಳು ಓದಲೇ ಬೇಕಾದ ಅಮರ ಕೃತಿ ದುರ್ಗಾಸ್ತಮಾನ. ತ.ರಾ.ಸು ಅವರು ಈ ಕಾದಂಬರಿಯಲ್ಲಿ ಬಳಸುವ ಶೈಲಿ ವೀರತ್ವದ ಶೈಲಿ ಚಿತ್ರದುರ್ಗ ಮತ್ತು ಚಿತ್ರದುರ್ಗದ ಸುತ್ತಮುತ್ತಲಿನ ಸಣ್ಣ ಪುಟ್ಟ ವಿವರಗಳನ್ನು ಪ್ರದೇಶಗಳನ್ನು ಅಧಿಕೃತವಾಗಿ ದಾಖಲಿಸುವ ಕೆಲಸ ಮಾಡುತ್ತಾರೆ.

ಕೃಷ್ಣದೇವರಾಯನ ಕಾಲದ ವಿಜಯನಗರ ಸಂಸ್ಥಾನವನ್ನು ಮರೆತು ಹೋದ ಸಾಮ್ರಾಜ್ಯ ಕರೆಯುತ್ತಾರೋ ಹಾಗೆಯೇ ದುರ್ಗದ ಕಥೆ – ವ್ಯಥೆಯನ್ನು ಸಾರುವ ದುರ್ಗಾಸ್ತಮಾನ ಕೃತಿ ಕಾಲದ ಪರೀಕ್ಷೆಯಲ್ಲಿ ಗೆದ್ದಿರುವ ತ.ರಾ.ಸು ಅವರ ಶ್ರೇಷ್ಠ ಕಲಾಕೃತಿ.

**ಆಕರ ಪಠ್ಯ :**

* ದುರ್ಗಾಸ್ತಮಾನ – ತ.ರಾ.ಸು – 1982 ಮೊದಲ ಮುದ್ರಣ, ಕಾವ್ಯಾಲಯ ಪ್ರಕಾಶನ, ಮೈಸೂರು

**ಪರಾಮರ್ಶನ ಗ್ರಂಥಗಳು :**

1. ಡಾ. ಎಂ. ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ (ಸಂ.) : ಚಂದ್ರವಳ್ಳಿ
2. ಎಂ. ಎಸ್. ಪುಟ್ಟಣ್ಣ : ಚಿತ್ರದುರ್ಗದ ಪಾಳೆಯಗಾರರು.
3. ಎ.ಡಿ. ಕೃಷ್ಣಯ್ಯ : ವೀರವನಿತೆ ಓಬವ್ವ
4. ಕ.ರಾ.ಕೃ (ಸಂ.) : ಚಿತ್ರಕಲ್ಲು ಮದಕರಿ (ಜಾನಪದಗೀತೆಗಳು)